ನಲ್ಲಿ ೬೦ ಮತ್ತು ಬೀದರ್‌ನಲ್ಲಿ ೪೦. ಮೆಡಿಕಲ್ ಕಾಲೇಜ್‌ನ ಇನ್‌ಟೇಕ್ ಎಷ್ಟಿದೆ ಎಂದು ತಮಗೆ ಗೊತ್ತಿದೆ ತಾವು ಪಶುಗಳನ್ನು ಏಕೆ ಇಷ್ಟು ನಿರ್ಲಕ್ಷ್ಯ ಮಾಡುತ್ತಿದ್ದೀರಿ ಎಂದು ನನಗೆ ಗೊತ್ತಾಗುತ್ತಿಲ್ಲ. ಇದು ಕೇವಲ ಶ್ರೀ ಬಸವರಾಜ ಮತ್ತು ಶ್ರೀ ಅಂಜನಮೂರ್ತಿಯವರ ಸಮಸ್ಯೆ ಅಲ್ಲ. ಇದು ನಮ್ಮ ೧೭೫ ತಾಲ್ಲೂಕುಗಳ ಸಮಸ್ಯೆ ಇದೆ. ವೆಟರ್ನರಿ ಕಾಲೇಜಿನ ಇನ್‌ಟೇಕ್‌ನ್ನು ಐದುನೂರು ಪರ್ಸೆಂಟ್ ಆದರೂ ಜಾಸ್ತಿ ಮಾಡಬೇಕು. ಕರ್ನಾಟಕ ರಾಜ್ಯಕ್ಕೆ ನೂರು ಇರುವುದು ಏನೂ ಸಾಲದು. At least it should be increased to 500.

ಅಧ್ಯಕ್ಷರು : ಈ ಪ್ರಶ್ನೆ ಇದರಲ್ಲಿ ಉದ್ಭವ ಆಗುವುದಿಲ್ಲ. ನೀವು ಬೇರೆ ಪ್ರಶ್ನೆಯನ್ನು ಕೇಳಬೇಕಾಗುತ್ತದೆ

ವಿಷಯ : ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೨೦೭ (೬೮೭)

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೊಬ್ಬರಿ ಬೆಲೆ ಕುಸಿತವನ್ನು ತಡೆಯಲು ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು ?

ಆ) ರಾಜ್ಯದಲ್ಲಿ ಎಷ್ಟು ಎಕರೆಗಳಲ್ಲಿ ತೆಂಗಿನ ತೋಟಗಳಿವೆ ? (ಜಿಲ್ಲಾವಾರು ಅಂಕಿಗಳನ್ನು ಒದಗಿಸುವುದು ?)

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಣ್ಣೆ ಕೊಬ್ಬರಿಗೆ ಈಗಾಗಲೇ ಭಾರತ ಸರಕಾರವು ಕ್ವಿಂಟಾಲ್ ಒಂದಕ್ಕೆ ೧೬೦೦ ರೂಪಾಯಿಗಳ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿಪಡಿಸಿ ಕರ್ನಾಟಕ ರಾಜ್ಯದ ಸಹಕಾರಿ ಮಾರುಕಟ್ಟೆ ಮಂಡಳಿ ಮೂಲಕ ರಾಷ್ಟ್ರೀಯ ಕೃಷಿ ಉತ್ಪಾದನಾ ಪರಿವಾಟ ಮಹಾಮಂಡಳಿಯು ಖರೀದಿಸುತ್ತಿದೆ ಇದೇ ರೀತಿಯಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗುವ ಒಣ ಕೊಬ್ಬರಿಗೂ ಸಹ ಕ್ವಿಂಟಾಲ್ ಒಂದಕ್ಕೆ ೨೫೦೦ ರೂ. ಗಳ ಕನಿಷ್ಟ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಭಾರತ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ ಹಾಗೂ ಈ ವಿಷಯದಲ್ಲಿ ಕೇಂದ್ರ ಸರ್ಕಾರದೊಡನೆ ವ್ಯವಹರಿಸಲಾಗುತ್ತಿದೆ.

ಆ) ರಾಜ್ಯದಲ್ಲಿ ಒಟ್ಟು ೩೪೪೪೦೦ ಹೆಕ್ಟೇರುಗಳಲ್ಲಿ ತೆಂಗನ್ನು ಬೆಳೆಸಲಾಗುತ್ತಿದೆ. ಜಿಲ್ಲಾವಾರು ಅಂಕಿ ಅಂಶಗಳು ಈ ಕೆಳಕಂಡಂತಿವೆ.

	ಜಿಲ್ಲೆ	ಹೆಕ್ಟೇರು
೧.	ಬೆಂಗಳೂರು (ನಗರ ಮತ್ತು ಗ್ರಾಮಾಂತರ)	೧೪,೯೦೮
೨.	ಬೆಳಗಾವಿ	೩,೨೮೬
೩.	ಬಳ್ಳಾರಿ	೨,೨೩೩
೪.	ಬೀದರ್	೩೯೮
೫.	ಬಿಜಾಪುರ	೨,೮೭೫
೬.	ಚಿಕ್ಕಮಗಳೂರು	೭೩,೧೭೩
೭.	ಚಿತ್ರದುರ್ಗ	೫೭,೪೫೩
೮.	ದಕ್ಷಿಣ ಕನ್ನಡ	೨೨,೩೭೪
೯.	ಧಾರವಾಡ	೬,೫೬೫
೧೦.	ಗುಲ್ಬರ್ಗ	೭೪೩
೧೧.	ಹಾಸನ	೪೧,೬೩೧
೧೨.	ಕೊಡಗು	೪೩೯೨
೧೩.	ಕೋಲಾರ	೭,೫೯೭
೧೪.	ಮಂಡ್ಯ	೧೬,೯೩೦
೧೫.	ಮೈಸೂರು	೨೦,೩೪೫
೧೬.	ಶಿವಮೊಗ್ಗ	೪೩,೩೫
೧೭.	ತುಮಕೂರು	೯೭,೯೬೧
೧೪.	ಉತ್ತರ ಕನ್ನಡ	೧೦,೪೪೯
೧೯.	ರಾಯಚೂರು	೩೯೯೧

ಶ್ರೀ ಎಂ. ವಿ. ವೆಂಕಟಪ್ಪ :– ಮಾನ್ಯ ಅಧ್ಯಕ್ಷರೇ ಅಖಿಲಭಾರತ ಮಟ್ಟದಲ್ಲಿ ಕೊಕೊನಟ್ ಬೋರ್ಡ ಎಂದು ಏನಿದೆ, ಅದೇ ರೀತಿ ರಾಜ್ಯ ಮಟ್ಟದಲ್ಲೂ ಮಾಡಿ ಕೊಬ್ಬರಿಯನ್ನು ಎಕ್ಸಪೋರ್ಟ ಮಾಡುವುದಕ್ಕೆ ಸರ್ಕಾರದವರು ಏಕೆ ಪ್ರಯತ್ನ ಮಾಡಬಾರದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ :– ಸನ್ಮಾನ್ಯ ಅಧ್ಯಕ್ಷರೇ, ಕೊಬ್ಬರಿ ಬೆಲೆಯನ್ನು ಕಡಿಮೆ ಮಾಡತಕ್ಕಂಥಾದ್ದನ್ನು ತಡೆಗಟ್ಟುವುದಕ್ಕೆ ರಾಷ್ಟ್ರಮಟ್ಟದ ನೀತಿಯನ್ನು ರಾಜ್ಯಮಟ್ಟದಲ್ಲಿ ಅನುಸರಿಸಿ ಬೋರ್ಡ ಮಾಡುವ ಮೂಲಕ ಅದನ್ನು ಖರೀದಿ ಮಾಡಿ ಹೊರಗಡೆಗೆ ಕಳಿಸುವುದಕ್ಕೆ ಶ್ರೀ ವೆಂಕಟಪ್ಪನವರು ಏನು ಸಲಹೆಯನ್ನು ಕೊಡುತ್ತಿದ್ದಾರೆ ಅದು ನಿಜಕ್ಕೂ ಸೂಕ್ತವಾದ ಸಲಹೆ. ಈ ಸಲಹೆಯನ್ನು ಸರ್ಕಾರ ಪರಿಗಣಿಸುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ :– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಣ್ಣೆ ಕೊಬ್ಬರಿಗೆ ಕ್ವಿಂಟಾಲಿಗೆ ೧೬೦೦ ರೂಪಾಯಿಗಳನ್ನು ಭಾರತ ಸರ್ಕಾರದವರು ಕೊಡುತ್ತಿದಾರೆ

ಎಂದು ಹೇಳಿದ್ದೀರಿ. ಆದೇ ರೀತಿ ದಕ್ಷಿಣಕನ್ನಡ ಜಿಲ್ಲೆಗೆ ಬದಲಾಗಿ ಎಲ್ಲಾ ಜಿಲ್ಲೆಗಳಿಗೂ ಸಂಬಂಧಪಟ್ಟ ಕಾರ್ಖಾನೆಗಳನ್ನು ಪ್ರಾರಂಭಮಾಡಿ ಏಕೆ ಮಾಡಬಾರದು ?

೧೨-೦೫ ಪಿ. ಎಮ್.

ಶ್ರೀ ಜಿ. ಪುಟ್ಟಸ್ವಾಮಿಗೌಡ :— ದಕ್ಷಿಣ ಕನ್ನಡ ಜಿಲ್ಲೆಗೂ ಆಯಿಲ್ ತೆಗೆಯುವ ತಕ್ಕ ಕೊಬ್ಬರಿಗೆ ಬೆಂಬಲ ಬೆಲೆ ೧೬೦೦ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಂಡಳಿ ಮೂಲಕ, ರಾಷ್ಟ್ರೀಯ ಕೃಷಿ ಉತ್ಪಾದನಾ ಮಾರಾಟ (NAFED) ಮಹಾಮಂಡಳಿಯವರು ಜಂಟಿ ವ್ಯವಹಾರದಲ್ಲಿ ಕೊಳ್ಳುತ್ತಿದ್ದಾರೆ. ಇದರಿಂದ, ಅಲ್ಲಿಯ ರೈತರಿಗೆ ಬೆಲೆ ಬಿದ್ದು ಹೋಗಿದೆ ಎಂಬ ಭಾವನೆ ಇಲ್ಲ. ಅಲ್ಲಿ ಸಾಕಷ್ಟು ಸಮಾಧಾನಕರವಾಗಿ ಈ ಮಾರ್ಕೆಟ್‌ನಿಂದ ವ್ಯವಸ್ಥೆ ಮಾಡಲಾಗಿದೆ. ಆದರೆ, ತುಮಕೂರು, ಹಾಸನ, ಚಿತ್ರದುರ್ಗ ಈ ಭಾಗದಲ್ಲಿ ಒಣ ಕೊಬ್ಬರಿ ಮಾರಾಟಕ್ಕೆ ವ್ಯವಸ್ಥೆ ಇದೆ. ಇದಕ್ಕೆ ಹೆಚ್ಚು ಬೆಲೆ ಕೊಡಬೇಕಾಗುತ್ತದೆ. ೨,೫೦೦ ರೂಪಾಯಿಗಳ ಬೆಂಬಲ ಬೆಲೆಯನ್ನು ಕೊಡಬೇಕೆಂದು ರಾಜ್ಯಸರ್ಕಾರ ಅಂದಿನ ವ್ಯವಸಾಯ, ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆದು ಕೇಂದ್ರಕ್ಕೆ ಶಿಫಾರಸ್ ಮಾಡಿದ್ದಾರೆ. ಕೇಂದ್ರದವರೂ ಕೂಡ ಈ ಶಿಫಾರಸ್ಸಿನ ಹಿನ್ನೆಲೆಯಲ್ಲಿ ೧೩-೧೧-೮೦ ರಂದು ಒಂದು ಸಭೆ ಮಾಡಿದ್ದಾರೆ. ನಮ್ಮ ಅಧಿಕಾರಿಗಳೂ ಕೂಡ ೨,೦೦೦ ರೂ. ಗಳ ಒಣಕೊಬ್ಬರಿಯು ದರದಿಂದ ರೈತರಿಗೆ ಲಾಸ ಆಗುತ್ತದೆ ಎಂದು ಹೇಳಿರುವುದರ ಮೇರೆಗೆ ಕೇಂದ್ರ ಸರ್ಕಾರದವರು ಶೀಘ್ರದಲ್ಲಿಯೇ ಪರಿಶೀಲಿಸುತ್ತೇವೆಂಬ ಭರವಸೆಯನ್ನೂ ಸಹ ಕೊಟ್ಟಿದ್ದಾರೆ ಈ ದಿಸೆಯಲ್ಲಿ ಎರಡು ವಿಧವಾದ ಕೊಬ್ಬರಿ ಬರುತ್ತದೆ. ಒಂದು ಎಣ್ಣೆಯನ್ನು ತೆಗೆಯುವ ತಕ್ಕ ಕೊಬ್ಬರಿ, ಮತ್ತೊಂದು ಒಣ ಕೊಬ್ಬರಿ. ಈ ಒಣ ಕೊಬ್ಬರಿಗೆ ಬೆಲೆಯನ್ನು ಜಾಸ್ತಿ ಮಾಡುವ ಬಗ್ಗೆ ಕೇಂದ್ರದವರ ಜೊತೆ ವ್ಯವಹರಿಸುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ.

ವಿಷಯ : ತುರುವೇಕೆರೆ ಜಿಲ್ಲಾ ಪರಿಷತ್ತಿನ ಇಂಜನಿಯರಿಂಗ ವಿಭಾಗದಲ್ಲಿ ನಡೆದಿರುವ ಹಣದ ದುರುಪಯೋಗ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : ೬೦೭ (೬೭೮)

ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು ಈ ವಿಷಯವನ್ನು ದಯವಿಟ್ಟು ತಿಳಿಸುವರೇ ?

ಆ) ತುರುವೇಕೆರೆಯಲ್ಲಿರುವ ಜಿಲ್ಲಾ ಪರಿಷತ್ತಿನ ಇಂಜನಿಯರಿಂಗ್ ವಿಭಾಗದಲ್ಲಿ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ದುರುಪಯೋಗವಾಗಿರುವ ಹಣವೆಷ್ಟು ? ಹಾಗೂ ಅದಕ್ಕೆ ಕಾರಣಗಳೇನು ?